## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS** 380/2022 **DW**-5

**ದಿಃ02.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಎಸ.ಎನ.ಎಚ ರವರಿಂದ.**

ನಾನು ಶಾಲೆ ಕಲಿತಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆಂದರೆ ಸರಿ. ದಾವಾ ಸಲ್ಲಿಸಿದವರು ನನ್ನ ತಮ್ಮನ ಮಗನಾಗಬೇಕು. ನನ್ನ ತಂದೆಯ ಹೆಸರು ಬಸವಣ್ಣೆಪ್ಪ ತಂದೆ ಹನುಮಂತಪ್ಪ ಆಗಿರುತ್ತದೆ. ಬಸವಣ್ಣೆಪ್ಪ ಇವರಿಗೆ ಏಳು ಮಂದಿ ಮಕ್ಕಳು. ಯಾರಾರೆಂದರೆ ಮೊದಲನೇಯದವಳು ನಾನೇ, 2 ನೇದವರು ಮಹಾದೇವಿ, 3 ನೇದವರು ಯಲ್ಲಪ್ಪ, 4 ನೇದವರು ಮಲ್ಲೇಶಪ್ಪ, 5 ನೇದವರು ಗುರುಶಿದ್ದಪ್ಪ, 6 ನೇದವರು ರಮೇಶಪ್ಪ, 7 ನೇದವರು ಬಸಕ್ಕ ಎಂದು ನುಡಿಯುತ್ತಾರೆ. 1 ನೇ ವಾದಿಯ ತಂದೆಯ ಹೆಸರು ಯಲ್ಲಪ್ಪ. ವಾದಿಯರು ಎನು ದಾವಾ ಸಲ್ಲಿಸಿರುತ್ತಾರೆಂದು ನಿಮಗೆ ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ಎನು ಕೇಸ ದಾಖಲಿಸಿದ್ದಾರೆಂದರೆ ಸಾಕ್ಷಿ ಎನು ಹಾಕಿರುತ್ತಾರೆ ಗೊತ್ತಿಲ್ಲ ಆದರೆ ಹಾಕಿರುತ್ತಾರೆ ಎನ್ನುತ್ತಾರೆ. ಈ ಕೇಸಗೆ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ಬಸವಣ್ಣೆಪ್ಪ ತಂದೆ ಹನುಮಂತಪ್ಪ ಅಂದರೆ ಹನುಮಂತಪ್ಪ ಗಳಿಸಿದ ಆಸ್ತಿಗಳು ನಾನು ನನ್ನ ಮುಖ್ಯ ವಿಚಾರಣೆಯ 4 ನೇ ಖಂಡಿಕೆಯಲ್ಲಿ ಬರೆಸಿರುವ ಆಸ್ತಿಗಳು ಎಂದರೆ ಸಾಕ್ಷಿ ಹನುಮಂತಪ್ಪ ಎನು ಗಳಿಸಿಲ್ಲ ಎನ್ನುತ್ತಾರೆ. ಹನುಮಂತಪ್ಪ ಎನು ಗಳಿಸಿಲ್ಲ ಎಂದು ತೋರಿಸಲು ಹಾಗೂ ನನ್ನ ತಂದೆ ಗಳಿಸಿದ್ದಾರೆಂದು ತೋರಿಸಲು ಎನಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ತಾವು ಹಾಜರುಪಡಿಸಿರುವ ದಾಖಲೆಗಳನ್ನು ಸಾಕ್ಷಿಗೆ ತೋರಿಸಿ ಇದರಲ್ಲಿ ಆ ದಾಖಲೆಗಳು ಯಾವುದು ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ಬಸವಣ್ಣೆಪ್ಪ ಗಳಿಸಿದ ಆಸ್ತಿಗಳು ಎಷ್ಟು ಇವೆ ಎಂದರೆ ಸಾಕ್ಷಿ 139 ರಲ್ಲಿ 7 ಎಕರೆ 7 ಗುಂಟೆ



ಎನ್ನುತ್ತಾರೆ. ಉಳಿದ ಆಸ್ತಿಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಸವಣ್ಣೆಪ್ಪ ಇವರಿಗೆ ಆಸ್ತಿಗಳು ಎಲ್ಲಲ್ಲಿ ಇವೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸರ್ವೆ ನಂಬರ 139 ರ ಚಕಬಂಧಿ ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ಆಗುವುದಿಲ್ಲ ಎನ್ನುತ್ತಾರೆ. ನನಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಆದರು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬಸವಣ್ಣೆಪ್ಪ

ಇರುವವರೆಗೂ ವಾಟ್ನಿ ಮಾಡಿದ್ದರಾ ಎಂದರೆ ಸಾಕ್ಷಿ ವಾಟ್ನಿ ಮಾಡಿರುತ್ತಾರೆ ಎನ್ನುತ್ತಾರೆ. ವಾಟ್ನಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದೇನು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ದಾಖಲೆಗಳು ಸಿಕ್ಕವು ಎಂದು ಹೇಳಿದ್ದು ನನ್ನ ತಂದೆ ಜೀವಂತ ಇದ್ದಾಗ ಯಾವುದೇ ದಾಖಲೆ ಮಾಡಿ ಹೋಗಿಲ್ಲವೆಂದರೆ ಸಾಕ್ಷಿ ಮಾಡಿದ್ದಾರೆ ಹಾಳೆ ಸಿಕ್ಕಿದೆ ಎನ್ನುತ್ತಾರೆ. ನನ್ನ ತಂದೆ ಇರುವವರೆಗೂ ಯಾವುದೇ ದಾಖಲೆ ಮಾಡಿಲ್ಲ ನಾನು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ